ಸಿ.ಸಿ ನಂಬ್ರ: 1296/2023
ಡಿ.ಡಬ್ಲ್ಯೂ : 1

ದಿನಾಂಕಃ 09-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಪಿರ್ಯಾದಿ ಪರ ಶ್ರೀಮತಿ ಎ ಸಿ ಎಸ್. ವಕೀಲರಿಂದ

1. ನನ್ನ ತಂದೆಯ ಹೆಸರು ಭಾಸ್ಕರ ಶೆಟ್ಟಿ, ಅವರು ಜೀವಂತ ಇರುತ್ತಾರೆ. ಜೀವಿತ ಅವಧಿಯಲ್ಲಿ ನನ್ನ ತಂದೆ ಬಾರ್ ಆ್ಯಂಡ್ ರೆಸ್ಟೋರೆಂಟ್ ನಡೆಸುತ್ತಿದ್ದರು. ಅದರ ಹೆಸರು ಸತೀಶ್ ಬಾರ್ ಆ್ಯಂಡ್ ರೆಸ್ಟೋರೆಂಟ್. ಈಗ ಯಾವುದೇ ಬಾರ್ ಆ್ಯಂಡ್ ರೆಸ್ಟೋರೆಂಟ್ ಇರುವುದಿಲ್ಲ. ಸದರಿ ಬಾರ್ ಆ್ಯಂಡ್ ರೆಸ್ಟೊರೆಂಟ್ ಸಿದ್ದಾಪುರದಲ್ಲಿ ಇರುತ್ತದೆ. ನನ್ನ ತಂದೆಗೆ 3 ಜನ ಮಕ್ಕಳು ಇರುತ್ತಾರೆ. ಅರುಣ್ ಕುಮಾರ್ ನಾನೇ. ನನ್ನ ತಮ್ಮ ಪ್ರವೀಣ್ ಕುಮಾರ್. ನಾನು ಹಾಗೂ ನನ್ನ ತಮ್ಮ ಅವಳಿ ಜವಳಿ ಮಕ್ಕಳು. ನೋಡಲು ಒಂದೇ ತರಹ ಇರುತ್ತೇವೆ.

2. ನನ್ನ ಮೇಲೆ ಕೇಸು ಹಾಕಿದ್ದು ಬ್ರಾಹ್ಮೀ ದುರ್ಗಾಪರಮೇಶ್ವರಿ ಸೊಸೈಟಿ. ಪಿರ್ಯಾದಿ ಸೊಸೈಟಿಯಲ್ಲಿ ನನ್ನ ತಮ್ಮ ಸಾಲ ತೆಗೆದುಕೊಂಡಿರುತ್ತಾರೆ. ಆ ಸೊಸೈಟಿಯಲ್ಲಿ ನಾನು 1 ಲಕ್ಷ ಸಾಲ ತೆಗೆದುಕೊಂಡಿರುತ್ತೇನೆ. ನನ್ನ ತಮ್ಮ 1 ಲಕ್ಷ ಸಾಲ ತೆಗೆದುಕೊಂಡಿರುತ್ತಾರೆ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಪಿರ್ಯಾದಿದಾರರು ನನಗೆ ನೋಟಿಸು ಕೊಟ್ಟಿದ್ದರು. ಆ ನೋಟಿಸಿನಲ್ಲಿ ಈ ಸಾಲ ನನ್ನ ತಮ್ಮ ತೆಗೆದುಕೊಂಡಿರುತ್ತಾನೆ, ನಾನು ತೆಗೆದುಕೊಂಡಿಲ್ಲ ಎಂದು ಕಾಣಿಸಿರುವುದಿಲ್ಲ. ನಾನು ಮತ್ತು ನನ್ನ ತಮ್ಮ ಇಬ್ಬರು ಸೊಸೈಟಿಯ ಸದಸ್ಯರು ಎಂದರೆ ಸಾಕ್ಷಿ ನೆನಪಾಗುವುದಿಲ್ಲ ಎಂದು ನುಡಿಯುತ್ತಾರೆ.

3. ಸಾಕ್ಷಿಗೆ ಪಿರ್ಯಾದಿ ಸೊಸೈಟಿಯಲ್ಲಿ ಸದಸ್ಯತ್ವ ಪಡೆದುಕೊಂಡ ಬಗ್ಗೆ 2 ದಾಖಲೆ ತೋರಿಸಿದ್ದು ಎರಡು ದಾಖಲೆಯಲ್ಲಿಃ ಒಂದು ಆರೋಪಿಯದ್ದು ಇನ್ನೊಂದು ಪ್ರವೀಣ ರವರದ್ದು ಆಗಿದ್ದು ಅವುಗಳನ್ನು ಆರೋಪಿ ಗುರುಸಿದ್ದರ ಮೇರೆಗೆ ಅವುಗಳನ್ನು ನಿ.ಪಿ. 7 ಮತ್ತು 8 ಎಂದು ಗುರುತಿಸಲಾಯಿತು. ಇನ್ನೊಂದು ದಾಖಲೆ ತೋರಿಸಿದ್ದು ಸಾಕ್ಷಿ ದಾಖಲೆ ನೋಡಿ ನಾನು, ನನ್ನ ತಮ್ಮ, ನನ್ನ ತಂದೆ ಪಿರ್ಯಾದಿ ಸೊಸೈಟಿಯಲ್ಲಿ ಸಾಲ ತೆಗೆದುಕೊಳ್ಳುವ ಸಲುವಾಗಿ ಕೊಟ್ಟ ಅರ್ಜಿ ಎಂದು ಒಪ್ಪಿ ಕೊಂಡ ಮೇರಗೆ ಸದರಿ ಅರ್ಜಿಯನ್ನು ನಿ.ಪಿ.9 ಎಂದು ಹಾಗೂ ಆ ಸಮಯದಲ್ಲಿ ಬರೆದುಕೊಟ್ಟ ಪ್ರಾಮಿಸರಿನೋಟು ಹಾಗೂ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿ ಎರಡು ದಾಖಲೆ ಒಪ್ಪಿ ಕೊಡ ಮೇರೆಗೆ ಅದನ್ನು

ನಿ.ಪಿ. 10 ಮತ್ತು 11 ಎಂದು ಗುರುತಿಸಲಾಯಿತು. ಅದೇ ರೀತಿ ನನ್ನ ತಮ್ಮ ಪ್ರವೀಣ ಕುಮಾರ್ ಶೆಟ್ಟಿ ಬರೆದು ಕೊಟ್ಟ ಸಾಲದ ಅರ್ಜಿ, ಪ್ರಾಮೀಸರಿ ನೋಟುಗಳನ್ನು ಕರಾರು ನೋಡಿ ಗುರುತಿಸಿ ಅವುಗಳನ್ನು ನನ್ನ ತಮ್ಮ ಬರೆದುಕೊಟ್ಟಿರುತ್ತಾನೆ ಎಂದು ನುಡಿದಿದ್ದರಿಂದ ಅವುಗಳನ್ನು ನಿ.ಪಿ. 12 ರಿಂದ 14 ಎಂದು ಗುರುತಿಸಲಾಯಿತು.

4. ಈ ರೀತಿ ಸಾಲದ ಅರ್ಜಿ ಕೊಟ್ಟು ಹಣ ತೆಗೆದುಕೊಂಡ ಮೇಲೆ ಸದರಿ ಹಣ ತೀರಿಸಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಆ ಸಾಲದ ಮರುಪಾವತಿಗೆ ಹೋದಾಗ ನಿ.ಪಿ. 1 ನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಪ್ರವೀಣನ ಸಾಲಕ್ಕೆ ನಾನು ಚೆಕ್ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ವ್ಯವಹಾರ ನೋಡಿಕೊಳ್ಳುತ್ತಿದ್ದೇನೆ. ಹಣವನ್ನು ಕಟ್ಟಿದ್ದರೆ ಆ ರಶೀದಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಹಣವನ್ನು ಪ್ರವೀಣ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಣವನ್ನು ಕೊಡುವ ಭಾಧ್ಯತೆಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಲವನ್ನು ನಾವು 3 ಜನ ಮಾಡಿದ್ದು ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**